ಇ) 2001–02ನೇ ಸಾಲಿಗೆ ರೂ. 1180.75 ಲಕ್ಷ ನಷ್ಟ

2002–03ನೇ ಸಾಲಿಗೆ ರೂ. 1482.58 ಲಕ್ಷ ನಷ್ಟ

2003–04ನೇ ಸಾಲಿಗೆ ರೂ. 338.98 ಲಕ್ಷ ನಷ್ಟ

ಈ) ಸದರಿ ನಿಗಮಕ್ಕೆ ಈಗಾಗಲೇ ರಾಜ್ಯ ಯೋಜನೆಯಡಿ ಶಾಲಾ ಮಕ್ಕಳಿಗೆ ಸಮವಸ್ತ್ರ ಸರಬರಾಜು ಮಾಡುವ ವಿದ್ಯಾ ವಿಕಾಸ ಯೋಜನೆ ಮತ್ತು ಅಗ್ಗ ದರದ ಸೀರೆ ಮತ್ತು ಪಂಚೆ ಯೋಜನೆಯನ್ನು ವಹಿಸಿದ್ದು, ಆಡಳಿತಾತ್ಮಕ ವೆಚ್ಚವನ್ನು ಕಡಿತಗೊಳಿಸಲು 270 ನೌಕರರುಗಳಿಗೆ ಸ್ವಯಂ ನಿವೃತ್ತಿ ಯೋಜನೆಯನ್ನು ಘೋಷಿಸಲಾಗಿದೆ. ಇದಕ್ಕಾಗಿ ಸರ್ಕಾರವು ರೂ.14.00 ಕೋಟಿ ಮೊತ್ತವನ್ನು ಸಾಲದ ರೂಪದಲ್ಲಿ ಮಂಜೂರು ಮಾಡಲು ಅನುಮೋದನೆ ನೀಡಿದೆ. ಸದರಿ ನೌಕರರಿಗೆ ನೀಡಬೇಕಾದ ಆರ್ಥಿಕ ಸೌಲಭ್ಯಕ್ಕಾಗಿ ರೂ.7.00 ಕೋಟಿ ಮೊತ್ತವನ್ನು ಈಗಾಗಲೇ ನಿಗಮಕ್ಕೆ ಬಿಡುಗಡೆ ಮಾಡಲಾಗಿದೆ. ಉಳಿದಿರುವ ನೌಕರರುಗಳನ್ನೂ ಸಹ ಈಗಾಗಲೇ ಸ್ವಯಂ ನಿವೃತ್ತಿ ಯೋಜನೆಯಡಿ ನಿವೃತ್ತಿಗೊಳಿಸಿದ್ದು, ಆ ಸಂಬಂಧ ರೂ. 7.00 ಕೋಟಿಗಳನ್ನು ಬಿಡುಗಡೆ ಮಾಡಲು ಕ್ರಮ ವಹಿಸಿದೆ.

ನಿಗಮದ ಪುನಃಶ್ಚೇತನಕ್ಕಾಗಿ ಕೇಂದ್ರ ಸರ್ಕಾರದ ದೀನ್ ದಯಾಳ್ ಹತ್‌ಕರ್ಗಾ ಪ್ರೋತ್ಸಾಹನ ಯೋಜನೆಯಡಿ ರೂ.40.00 ಕೋಟಿಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ರೂ.40.00 ಕೋಟಿಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಮಪಾಲಾಗಿ ಎರಡು ಕಂತುಗಳಲ್ಲಿ ಬಿಡುಗಡೆ ಮಾಡಲು ಅನುಮೋದಿಸಲಾಗಿದೆ. ಇದರಡಿ ರಾಜ್ಯ ಪಾಲು ರೂ.5.00 ಕೋಟಿಗಳನ್ನು 2004–05ನೇ ಸಾಲಿಗೆ ಬಿಡುಗಡೆ ಮಾಡಲಾಗಿದೆ. ಕೇಂದ್ರ ಸರ್ಕಾರವೂ ಸಹ ರೂ.10.00 ಕೋಟಿಗಳನ್ನು ಮಾರ್ಜಿನ್ ಮನಿ ರೂಪದಲ್ಲಿ ಬಿಡುಗಡೆ ಮಾಡಿರುತ್ತದೆ. ಇದಲ್ಲದೆ, ಕೆ.ಹೆಚ್.ಡಿ.ಸಿ. ನೇಕಾರರಿಗೆ ಕಚ್ಚಾಮಾಲು ಖರೀದಿಗೆ ರೂ.1.00 ಕೋಟಿಯನ್ನೂ ಸಹ ಬಿಡುಗಡೆ ಮಾಡಲಾಗಿದೆ.

ಉ) ನಿಗಮವು ನಷ್ಟದಿಂದ ಲಾಭದತ್ತ ನಡೆದಿದ್ದು, ಇದರಿಂದ ನಿಗಮದ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ 15000 ಕೈಮಗ್ಗ ನೇಕಾರರಿಗೆ ಸತತ ಉದ್ಯೋಗವನ್ನು ನೀಡಲು ಸಾಧ್ಯವಾಗುವುದು.

4678 (5263) ಶ್ರೀ ಶಿವಾನಂದ ನಾಯಕ (ಭಟ್ಕಳ) :– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊನ್ನಾವರ ಮತ್ತು ಭಟ್ಕಳ್ ತಾಲ್ಲೂಕಿನ ಗೇರಸೊಪ್ಪ ಮತ್ತು ಮುರುಡೇಶ್ವರದಲ್ಲಿ ಸರ್ಕಾರದ ಬಾಲಕರ ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿವೆಯೇ;

ಅ) ಈ ಬಾಲಕರ ವಸತಿನಿಲಯಗಳು ಯಾವ ಸಾಲಿನಿಂದ ಕಾರ್ಯನಿರ್ವಹಿಸುತ್ತಿವೆ;

ಇ) ಈ ಎರಡು ವಸತಿನಿಲಯಗಳು ಸ್ವತಂತ್ರ (ಸ್ವಂತ) ಕಟ್ಟಡವನ್ನು ಹೊಂದಿವೆಯೇ ಅಥವಾ ಖಾಸಗಿ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆಯೇ;

ಈ) ಸರ್ಕಾರ ಸ್ವಂತ ಕಟ್ಟಡ ಕಟ್ಟಲು ಈ ಎರಡು ಬಾಲಕರ ವಸತಿನಿಲಯಕ್ಕೆ ಯಾವ ಸ್ಥಳದಲ್ಲಿ ಜಮೀನು ಕಾಯ್ದಿರಿಸಿದೆ ಹಾಗೂ ಯಾವಾಗ ವಸತಿಗೃಹದ ಕಟ್ಟಡ ನಿರ್ಮಾಣ ಮಾಡಲಾಗುವುದು; (ವಿವರ ಒದಗಿಸುವುದು)?

ಡಾ॥ ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಹೊನ್ನಾವರ ತಾಲ್ಲೂಕಿನ ನಾಗರಬಸ್ತಿಕೇರಿ (ಗೇರಸೊಪ್ಪ) ಗ್ರಾಮದಲ್ಲಿ ಹಾಗೂ ಭಟ್ಕಳ್ ತಾಲ್ಲೂಕಿನ ಮುರುಡೇಶ್ವರದಲ್ಲಿ ತಲಾ 50 ಸಂಖ್ಯಾಬಲದ ಹಿಂದುಳಿದ ವರ್ಗಗಳ ಮೆಟ್ರಿಕ್–ಪೂರ್ವ ಬಾಲಕರ ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿವೆ.

ಆ) 1) ಮೆಟ್ರಿಕ್–ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ನಾಗರಬಸ್ತಿಕೇರಿ (ಗೇರಸೊಪ್ಪ) – 2001–02 ನಿಂದ ಹಾಗೂ

2) ಮೆಟ್ರಿಕ್–ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಮುರುಡೇಶ್ವರ 1983–84ನೇ ಸಾಲಿನಿಂದ ಕಾರ್ಯನಿರ್ವಹಿಸುತ್ತಿವೆ.

ಇ) ಈ ಎರಡೂ ನಿಲಯಗಳು ಖಾಸಗಿ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ.

ಈ) ಈ ಎರಡೂ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣಕ್ಕಾಗಿ ನಿವೇಶನವನ್ನು ಈ ಕೆಳಕಂಡ ಸ್ಥಳಗಳಲ್ಲಿ ಕಾಯ್ದಿರಿಸಲಾಗಿದೆ.

1) ನಾಗರಬಸ್ತಿಕೇರಿ (ಗೇರಸೊಪ್ಪ) ಸರ್ವೆ ನಂ.3/1 ಅ ದಲ್ಲಿ 0–15–0 ಗುಂಟೆ

2) ಮುರುಡೇಶ್ವರ ಮಾವಳ್ಳಿ ಗ್ರಾಮ ಸರ್ವೆ ನಂ. 469ರಲ್ಲಿ 0–4–4 ಮುರುಡೇಶ್ವರದಲ್ಲಿ ವಿದ್ಯಾರ್ಥಿನಿಲಯದ ಕಟ್ಟಡ ನಿರ್ಮಾಣವನ್ನು 2005–06ನೇ ಸಾಲಿನಲ್ಲಿ ಜಿಲ್ಲಾವಲಯ ಯೋಜನೆಯಲ್ಲಿ ಕೈಗೆತ್ತಿಕೊಳ್ಳಲು ಕ್ರಮವಹಿಸಲಾಗಿದೆ.

ನಾಗರಬಸ್ತಿಕೇರಿ (ಗೇರಸೊಪ್ಪ) ವಿದ್ಯಾರ್ಥಿನಿಲಯದ ಕಟ್ಟಡ ನಿರ್ಮಾಣದ ಕುರಿತಂತೆ ಆಯವ್ಯಯದ ಲಭ್ಯತೆ ಮೇರೆಗೆ ಕೈಗೆತ್ತಿಕೊಳ್ಳಲಾಗುತ್ತದೆ.